# ಕ್ರೈಸ್ತಧರ್ಮದ ಮೂಲಪುರುಷ ಸಂತ ಪಾಲ್

ಜಿ.ಎಸ್. ಜಯದೇವ

**ಕ್ರೈಸ್ತಧರ್ಮದ ಮೂಲಪುರುಷನಾದ ಸಂತ ಪಾಲ್‌ನ ಕಿರುಪರಿಚಯವನ್ನು ಮಾಡಿಕೊಟ್ಟಿರುವ ಶ್ರೀ ಜಯದೇವ ಅವರು "ದೀನಬಂಧು" "ಶಕ್ತಿಧಾಮ" ಮುಂತಾದ ಸಂಸ್ಥೆಗಳ ಮೂಲಕ ತಮ್ಮನ್ನು ಸಮಾಜಸೇವಾಕಾರ್ಯದಲ್ಲಿ ತೊಡಗಿಸಿಕೊಂಡಿರುವರು.**

**ಕ್ರಿ**ಸ್ತನನ್ನು ಬಿಟ್ಟರೆ ಬೈಬಲ್ ಇತಿಹಾಸದಲ್ಲಿ "ಪಾಲ್"ನ ಹೆಸರು ಅತ್ಯಂತ ಪ್ರಭಾವಶಾಲಿಯಾಗಿ ಕಂಡುಬರುತ್ತದೆ. ಇವನು ಬಹುಶಃ ಕ್ರಿಸ್ತಶಕ ೫ರಲ್ಲಿ ಟರ್ಕಿಯ "ಟಾರಸ್" ಎಂಬ ಊರಿನಲ್ಲಿ ಜನಿಸಿರಬಹುದು. ಇವನ ಮೊದಲ ಹೆಸರು "ಸಾಲ್" ಎಂದು. ಸಂಪ್ರದಾಯಸ್ಥ ಕರ್ಮಠ ಯಹೂದಿ ಮನೆತನದಲ್ಲಿ ಜನಿಸಿದ ಇವನಿಗೆ ತನ್ನ ಧರ್ಮದಲ್ಲಿ ಅಪಾರ ನಂಬಿಕೆ. ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸದ ಜೊತೆಗೆ ಅಂದಿನ ಸುಪ್ರಸಿದ್ಧ ಯಹೂದಿ ಗುರುವಿನ ಅಡಿಯಲ್ಲಿ ಯಹೂದಿ ಧರ್ಮವನ್ನೂ ಅಭ್ಯಾಸ ಮಾಡಿದ. ನಂತರ ಯಹೂದ್ಯರ ಧರ್ಮಗುರು ಅಥವಾ ರಬ್ಬಿಸ್ಥಾನಕ್ಕೆ ಬಂದ. ರಬ್ಬಿಗಳೆಲ್ಲರೂ ಸಾಮಾನ್ಯವಾಗಿ ಮದುವೆಯಾಗುವುದರಿಂದ ಇವನೂ ಸಹ ಮದುವೆಯಾಗಿದ್ದನೆಂದೇ ಹೇಳಬಹುದು.



ಡೆನ್ಮಾರ್ಕಿನ ಶಿಲ್ಪಿಯೊಬ್ಬನಿಂದ ರಚಿತವಾದ ಸಂತ ಪಾಲ್‌ನ ಶಿಲ್ಪಕೃತಿ. ಅದು ಈಗ ಕೊಪನ್ ಹೆಗನ್‌ನ ವಸ್ತು ಸಂಗ್ರಹಾಲಯದಲ್ಲಿದೆ.

ಪಾಲ್ ಕ್ರಿಸ್ತನ ಸಮಕಾಲೀನನಾದರೂ ಕ್ರಿಸ್ತ ಮತ್ತು ಇವನ ಭೇಟಿ ಎಂದೂ ಆಗಲೇ ಇಲ್ಲ. ಕ್ರಿಸ್ತನ ಬೋಧನೆಗಳ ಬಗ್ಗೆ ಇವನಿಗೆ ತಿಳಿದಿರಲೂ ಇಲ್ಲ. ಆದರೆ ಕ್ರಿ.ಶ. ೩೬ರಲ್ಲಿ ಇವನು ಜೆರುಸೇಲಂಗೆ ಬಂದಾಗ ಕ್ರಿಸ್ತನ ಬೋಧನೆಗಳು ಇವನಿಗೆ ತಿಳಿಯಿತು. ಸಂಪ್ರದಾಯಸ್ಥ ಯಹೂದಿಯಾದ ಇವನಿಗೆ ಕ್ರಿಸ್ತನ ಬೋಧನೆಗಳೆಲ್ಲ ದೈವ ದ್ರೋಹದಂತೆ ಕಂಡುಬಂದವು. ತನ್ನ ಧರ್ಮದಲ್ಲಿ ಅಪಾರ ನಂಬಿಕೆಯುಳ್ಳ ಪಾಲ್ ಈ ದೈವ ನಿಂದನೆಯ ವಿರುದ್ಧ ಸಮರ ಸಾರಿದ. ಕ್ರಿಶ್ಚಿಯನ್ ಧರ್ಮದ ಮೂಲೋತ್ಪಾಟನೆ ಅವನ ಜೀವನದ ಗುರಿಯಾಯಿತು. ಒಬ್ಬ ದೊಡ್ಡ ಯಹೂದಿ ಧರ್ಮ ಗುರುವಿನ ಕೈಕೆಳಗೆ ಬಾಡಿಗೆ ಬಂಟನಂತೆ ಕೆಲಸ ಮಾಡತೊಡಗಿದ. ಕ್ರಿಶ್ಚಿಯನ್ನರನ್ನು ಅವರವರ ದೈವನಿಂದನೆಯ ಅಪರಾಧಕ್ಕೆ ಅನುಗುಣವಾಗಿ ಕೆಲವರನ್ನು ಸೆರೆಮನೆಗೆ ತಳ್ಳಿದ, ಮತ್ತೆ ಕೆಲವರ ಶಿರಚ್ಛೇದಕ್ಕೆ ಶಿಫಾರಸು ಮಾಡಿದ. ಹೀಗೆ ಹೊಸ ಪಂಥ ವನ್ನು ಬೇರು ಸಹಿತ ಕಿತ್ತೆಸೆಯಲು ತನ್ನ ಸರ್ವಸ್ವವನ್ನೂ ಮುಡಿಪಿಟ್ಟ. ತಾನು ಮಾಡುತ್ತಿದ್ದ ಕಾರ್ಯ ಕ್ರೌರ್ಯವಾಗಿ ಪಾಲ್‌ನಿಗೆ ಕಾಣಿಸಲಿಲ್ಲ. ಅವನ ನಂಬಿಕೆಗಳಲ್ಲಿ ಅವನಿಗಿದ್ದ ಶ್ರದ್ಧೆ ತನ್ನ ಪ್ರಾಣವನ್ನು ಸಹ ಲೆಕ್ಕಿಸದಷ್ಟು ತೀಕ್ಷ್ಣವಾಗಿತ್ತು. ನಂಬಿದಂತೆ ನಡೆಯುವ ವ್ಯಕ್ತಿ ಪಾಲ್ ಆಗಿದ್ದ. ಹೀಗೆ ಒಮ್ಮೆ ಕ್ರಿಸ್ತಭಕ್ತ ಸ್ಟೀಫನ್‌ಗೆ ವಿಧಿಸಲಾದ "ಕಲ್ಲುಹೊಡೆದು ಸಾಯಿಸುವ ಶಿಕ್ಷೆ"ಯನ್ನು ಸಮರ್ಥಕವಾಗಿ ನಿರ್ವಹಿಸಿದ. ಸ್ಟೀಫನ್ನನ ಶಿಷ್ಯರು ಡೆಮಾಸ್ಕಸ್‌ನಲ್ಲಿ ಅಡಗಿರಬಹುದೆಂದು ತಿಳಿದು ಅವರನ್ನೂ ಶಿಕ್ಷಿಸಲು ಡೆಮಾಸ್ಕಸ್ ಕಡೆಗೆ ಹೊರಟ.

ದೇವರ ಕಾರ್ಯ ಎಷ್ಟು ವಿಚಿತ್ರವಾಗಿರುತ್ತದೆ ಎಂಬುದಕ್ಕೆ ಮುಂದೆ ನಡೆದ ಘಟನೆಯೇ ಸಾಕ್ಷಿ. ಕ್ರಿಸ್ತದ್ವೇಷಿಯೊಬ್ಬ ಕ್ರಿಸ್ತ ಪ್ರೇಮಿಯಾಗಿ ಪರಿಣಮಿಸಿದ್ದು, ತನ್ನ ಇಡೀ ಜೀವನವನ್ನು ಕ್ರಿಸ್ತನ ಸಂದೇಶಕ್ಕಾಗಿ ಸವೆಸಿದ್ದು, ಕಡೆಗೆ ಕ್ರಿಸ್ತನಿಗಾಗಿ ಶಿರಚ್ಛೇದನಗೊಂಡು ಪ್ರಾಣಾರ್ಪಣೆ ಮಾಡಿದ್ದು ಒಂದು ಪವಾಡಸದೃಶ ಕಥೆ. ಚಿನ್ನ, ಬೆಳ್ಳಿಗಳನ್ನು ಸೃಷ್ಟಿಸುವ, ಖಾಯಿಲೆಗಳನ್ನು ವಾಸಿಮಾಡುವ ಪವಾಡಗಳಿಗಿಂತ ಈ ಆಂತರ್ಯದ ಪರಿವರ್ತನೆ ಒಂದು ಅದ್ಭುತ ಪವಾಡ. ಇದು ಬಹುಶಃ ವಾಲ್ಮೀಕಿ ವೇಮನರಲ್ಲಿ ಆದ ಪರಿವರ್ತನೆಯ ಹಾಗೆ. ಕ್ರಿಸ್ತನು ಅನೇಕ ಪವಾಡಗಳನ್ನು ಮಾಡಿದ. ಅವನು ಬ್ರೆಡ್ ಸೃಷ್ಟಿಸಿ ಕೊಟ್ಟಾಗ ಅಥವಾ ನೀರು ಸೃಷ್ಟಿಸಿ ಕೊಟ್ಟಾಗ ಜನ ಅವನನ್ನು ಸುತ್ತುವರಿದರು. ಆಗ ಕ್ರಿಸ್ತ, "ನೀವೆಲ್ಲ ನನ್ನ ಬಳಿ ಏಕೆ ಬರುತ್ತೀರಿ ಎಂದು ನನಗೆ ತಿಳಿದಿದೆ. ನಿಮಗೆ ಎಂದೂ ಹಸಿವಾಗದ ದೈವೀಬ್ರೆಡ್ ಕೊಡುತ್ತೇನೆ ಎಂದಾಗ, ನಿಮಗೆ ಎಂದೆಂದೂ ತೃಷೆಯಾಗದ ದೈವೀಪಾನೀಯ ಕೊಡುತ್ತೇನೆ ಎಂದು ಕರೆದಾಗ ನೀವೆಲ್ಲರೂ ಹಿಂದೆ ಸರಿಯುತ್ತೀರಿ" ಎಂದು ಛೇಡಿಸಿದ. ಆದರೆ ಕ್ರಿಸ್ತಾನುಭೂತಿಯಿಂದ ಪಾಲ್‌ನಲ್ಲಿ ಆದ ಬದಲಾವಣೆಯೆ ಬೇರೆ. ಅದು ಅವನ ಇಡೀ ವ್ಯಕ್ತಿತ್ವವನ್ನು ಖಾಲಿಮಾಡಿಬಿಟ್ಟಿತು. ಅವನೊಂದು ಕ್ರಿಸ್ತಾಮೃತದಿಂದ ತುಂಬಿ ಹೋದ ಸಜೀವ ಪಾತ್ರೆಯಾಗಿಬಿಟ್ಟ.

ಡೆಮಾಸ್ಕಸ್ ಹಾದಿಯಲ್ಲಿ ಅವನು ನಡೆಯುತ್ತಿದ್ದಾಗ ಕಣ್ಣು ಕೋರೈಸುವ ಬೆಳಕೊಂದು ಕಂಡಿತು. ಜೊತೆಗೆ ಒಂದು ಅಶರೀರವಾಣಿ ನುಡಿಯಿತು : "ಸಾಲ್, ನನಗೇಕೆ ಕಿರುಕುಳ ಕೊಡುತ್ತಿದ್ದೀಯೆ. ನಿನ್ನಿಂದ ಕಿರುಕುಳ ಪಡೆಯುತ್ತಿರುವ ನಾನು ಜೀಸಸ್." ಈ ಅನುಭವದ ನಂತರ "ಸಾಲ್" ಪರಿವರ್ತನೆಗೊಂಡು "ಪಾಲ್" ಆದ. ಕ್ರಿಸ್ತನ ಆ ಪ್ರಖರ ಬೆಳಕು ಅವನನ್ನು ಪೂರ್ಣ ಕುರುಡನನ್ನಾಗಿ ಮಾಡಿತು, ಅವನ ಪೂರ್ವಾಗ್ರಹ ಪೀಡಿತ ದೃಷ್ಟಿಯನ್ನು ಕಳೆಯಲೋ ಎಂಬಂತೆ. ಕುರುಡ ಪಾಲ್‌ನನ್ನು ಯಾರೋ ಡೆಮಾಸ್ಕಸ್‌ಗೆ ಕರೆದೊಯ್ದರು. ಮೂರುದಿನ ಅವನು ಆ ಕುರುಡಿನ ಕತ್ತಲಿನಲ್ಲಿ, ಮನಮಂಥನದಲ್ಲಿ ಕಳೆದ. ಕಡೆಗೆ ಕ್ರಿಸ್ತಶರಣರ ಕೃಪೆಯಿಂದ ಅವನಿಗೆ ಕಣ್ಣು ಬಂತು ಎಂದು ಹೇಳುತ್ತಾರೆ. ಆದರೆ ಇದು ಹೊಸ ಕಣ್ಣು, ಹೊಸ ದೃಷ್ಟಿ. ಪ್ರಪಂಚ ಇದ್ದ ಹಾಗೇ

ನೀವು ಭಗವಂತನ ದೇವಾಲಯವೆಂಬುದು, ಭಗವತ್ ಚೈತನ್ಯ ನಿಮ್ಮಲ್ಲಿ ನೆಲೆಸಿದೆ ಎಂಬುದು ನಿಮಗೆ ತಿಳಿದಿಲ್ಲವೆ?

—*ಸಂತ ಪಾಲ್ (St.Paul)*

ಇರುತ್ತದೆ. ನಾವು ನೋಡುವ ದೃಷ್ಟಿಕೋನ ಬದಲಿಸಿದರೆ ಸಾಕು, ಸೈತಾನನ ಪ್ರಪಂಚ ಮಂಜಿನ ಹಾಗೆ ಕರಗಿ ದೈವೀಪ್ರಪಂಚ ಮೈತಳೆಯುತ್ತದೆ. ಪಾಲ್‌ನಿಗೆ ಹೊಸ ದೃಷ್ಟಿಯಲ್ಲಿ ಕ್ರಿಸ್ತಪ್ರಪಂಚ ಗೋಚರವಾಯಿತು. ಅವನ ಒಳಗೂ ಹೊರಗೂ ಕ್ರಿಸ್ತನೇ ತುಂಬಿಹೋದ. ಅಂದಿನಿಂದ ಅವನು ಕ್ರಿಸ್ತನ ಪ್ರೇಮಸಂದೇಶ ಹೊತ್ತು ಸಾರತೊಡಗಿದ.

ಈ ಪ್ರೇಮಸಂದೇಶ ಪಡೆಯಲು ಅಧಿಕಾರ ಭೇದದ ಪ್ರಶ್ನೆ ಇರಲಿಲ್ಲ. ಪಾಲ್ ಅತ್ಯಂತ ಹೀನ ಮನುಷ್ಯರಲ್ಲೂ ಪರಿವರ್ತನೆಯ ಸಾಧ್ಯತೆಯನ್ನು ತಳ್ಳಿಹಾಕಲಿಲ್ಲ. ಅವನ ಜೀವನವೆ ಅವನಿಗೆ ಪಾಠ ಕಲಿಸಿತ್ತು. ತನ್ನಂತಹ ಕ್ರಿಸ್ತದ್ವೇಷಿ ಕ್ರಿಸ್ತಪ್ರೇಮಿಯಾಗಲು ಸಾಧ್ಯವಾದರೆ ಈ ಪ್ರಪಂಚದಲ್ಲಿ ಯಾರು ತಾನೆ ಬದಲಾಗಲು ಸಾಧ್ಯವಿಲ್ಲ? ಆದ್ದರಿಂದ ಅವನು ಎಲ್ಲರನ್ನೂ ಪ್ರೀತಿಸತೊಡಗಿದ. ಮನುಷ್ಯರನ್ನು ಪ್ರೀತಿಸುವುದೇ ಅವನಿಗೆ ಅಧ್ಯಾತ್ಮದ ಚರಮಗುರಿಯಾಗಿ ಕಂಡಿತು. ಪತ್ರಮುಖೇನ ಅನೇಕರಿಗೆ ಮಾರ್ಗದರ್ಶನ ನೀಡಿದ. ಅವುಗಳಲ್ಲಿ ಗ್ರೀಸ್‌ದೇಶದ ಕೊರಿಂಥ್ ಎಂಬ ಊರಿನ ಜನರಿಗೆ ಬರೆದ ಒಂದು ಪತ್ರ ಅತ್ಯಂತ ಹೃದಯಸ್ಪರ್ಶಿಯಾಗಿದೆ.

ಕೊರಿಂಥ್ ಎಂಬುದು ಗ್ರೀಸ್‌ದೇಶದ ಒಂದು ಊರು. ಇದು ಗ್ರೀಸ್‌ನ ದಕ್ಷಿಣದ ಸಮುದ್ರ ತೀರದಲ್ಲಿರುವ, ಒಂದು ಬಂದರು ಇರುವ ಊರು. ಈ ಊರಿನಲ್ಲಿ ಹೆಚ್ಚಾಗಿ ಗುಲಾಮರೆ ವಾಸಿಸುತ್ತಿದ್ದರು. ವ್ಯಾಪಾರಿಕೇಂದ್ರವಾಗಿದ್ದ ಈ ಊರಿನಲ್ಲಿ ಜನಗಳು ಸ್ವೇಚ್ಛಾಚಾರಿಗಳಾಗಿದ್ದರು. ಪಾಲ್ ಕೊರಿಂಥ್‌ನಲ್ಲಿ ಕ್ರಿ.ಶ. ಸುಮಾರು ೫೭ ಮತ್ತು ೫೮ರ ಚಳಿಗಾಲವನ್ನು ಕಳೆದ ಎಂದು ಕೆಲವು ದಾಖಲೆಗಳು ತಿಳಿಸುತ್ತವೆ. ಪಾಲ್ ಕೊರಿಂಥನ್ ಸ್ವೇಚ್ಛಾಚಾರಿ ಜನರಿಗೆ ಸನ್ಮಾರ್ಗ ತೋರಲು ಪ್ರಯತ್ನಿಸಿದ. ಬೇರೆ ಬೇರೆ ಊರುಗಳಿಂದ ಕೊರಿಂಥಿಯನ್ನರಿಗೆ ಪಾಲ್ ಅನೇಕ ಪತ್ರಗಳನ್ನು ಬರೆದ. ಪಾಲ್ ತನ್ನ ಜೀವಿತ ಕಾಲದಲ್ಲಿ ಅನುಭವಿಸಿದ ಪರಮಪ್ರೀತಿ, ಹೃದಯ ವೈಶಾಲ್ಯಗಳು ಅವನು ಕೊರಿಂಥಿಯನ್ನರಿಗೆ ಬರೆದ "ಕೊರಿಂಥಿಯನ್ಸ್ ೧೩" ಈ ಪತ್ರದಲ್ಲಿ ಕಾಣುತ್ತೇವೆ. ಈ ಪತ್ರ ಪ್ರೀತಿಯ ಮಂತ್ರ ಎಂದೇ ಹೆಸರಾಗಿದೆ. ಪತ್ರ ಹೀಗಿದೆ:

"ಈ ಭೂಮಿ ಆಕಾಶಗಳಲ್ಲಿರುವ ಎಲ್ಲ ಭಾಷೆಗಳನ್ನೂ ಕಲಿತು ನಿರರ್ಗಳವಾಗಿ ಮಾತನಾಡಬಲ್ಲ ಸಿದ್ಧಿ ನನಗೆ ಲಭಿಸಬಹುದು. ಆದರೆ ಇತರರನ್ನು ಪ್ರೀತಿಸಲಾರದವನಾದಲ್ಲಿ ಏನು ಉಪಯೋಗ? ಈ ಪ್ರಪಂಚವನ್ನು ಅರ್ಥಹೀನ ಶಬ್ದಗಳಿಂದ ತುಂಬುತ್ತೇನಷ್ಟೆ. ಪ್ರಪಂಚದ ಹಿಂದಿನ ಮುಂದಿನ ಆಗುಹೋಗುಗಳನ್ನೆಲ್ಲ ಆಚಂದ್ರಾರ್ಕವಾಗಿ ಅರಿಯಬಲ್ಲ ಸಿದ್ಧಿ ನನಗೆ ದೊರೆತು ಇತರರನ್ನು ಪ್ರೀತಿಸುವ ಶಕ್ತಿ ದೊರೆಯದಿದ್ದರೆ ಈ ಸಿದ್ಧಿಗಳಿಂದ ಏನು ಉಪಯೋಗ? ಅದ್ಭುತ ಶ್ರದ್ಧೆಯಿಂದ ಪರಮ ಸಿದ್ಧಿಗಳನ್ನು ಪಡೆದು, ಬೃಹತ್ ಬೆಟ್ಟದೊಡನೆ ಮಾತನಾಡಿ ಅದನ್ನು ಕದಲಿಸಬಲ್ಲೆನಾದರೂ ಇತರರನ್ನು ಪ್ರೀತಿಸಲು ಕಲಿಯದಿದ್ದರೆ ಈ ವರಗಳಿಂದೇನು ಪ್ರಯೋಜನ? ನನ್ನಲ್ಲಿದ್ದ ಸಂಪತ್ತನ್ನೆಲ್ಲ ಬಡವರಿಗೆ ಧಾರೆ ಎರೆದು, ಧರ್ಮಪ್ರಚಾರಕ್ಕಾಗಿ ಅಗ್ನಿಪ್ರವೇಶ ಮಾಡಿ, ಆತ್ಮಾಹುತಿ ಮಾಡಿಕೊಂಡು ಇತರರನ್ನು ಪ್ರೀತಿಸಲು ಅರಿಯದಿದ್ದರೆ ಈ ತ್ಯಾಗ ನಿಷ್ಪ್ರಯೋಜಕ.

"ಪ್ರೇಮವೆಂಬುದು ಸಹನಶೀಲ; ದಯಾಪರ, ಅಸೂಯೆ-ಈರ್ಷ್ಯಾರಹಿತ, ಹಮ್ಮುಗಳಿಲ್ಲದ ನಿರಭಿಮಾನಿ, ಸದಾ ಸ್ವಾರ್ಥದಿಂದ ದೂರವಿರುವ ನಿಗರ್ವಿ, ವಿನಯಶೀಲ. ಪ್ರೇಮ ತನ್ನ ಮಾರ್ಗವನ್ನು ಹಕ್ಕಿನ ಬಲದಿಂದ ನಿಶ್ಚಯಿಸುವುದಿಲ್ಲ, ಸಿಡುಕಿಗೆ ಅಪಾರ್ಥಕ್ಕೆ ಅವಕಾಶ ಕೊಡುವುದಿಲ್ಲ. ಸೇಡಿಗೆ ಅವಕಾಶ ವೀಯದೆ ತನಗಾದ ಅವಮಾನ ಕುಂದು ಕೊರತೆಗಳನ್ನು ದಿವ್ಯ ನಿರ್ಲಕ್ಷ್ಯದಿಂದ ನೋಡುತ್ತದೆ. ತನ್ನೆದುರು ಅನ್ಯಾಯ ನಡೆದಾಗ ಸಂತೋಷಿಸುವುದಿಲ್ಲ. ಸತ್ಯಕ್ಕೆ ಜಯ ದೊರೆತಾಗ ಉತ್ಸಾಹಗೊಳ್ಳುತ್ತದೆ. ನೀವು ಯಾರನ್ನಾದರೂ ನಿಜವಾಗಿಯೂ ಪ್ರೀತಿಸಬಲ್ಲಿರಾದರೆ ಆ ಪ್ರೇಮದ ನಿಷ್ಠೆಯನ್ನು ಎಂತಹ ಬೆಲೆಗಾದರೂ ವಿನಿಯೋಗಿಸಿ ಕಾಪಾಡಿಕೊಳ್ಳುತ್ತೀರಿ. ನೀವು ಯಾವಾಗಲೂ ಆತನನ್ನು ನಂಬುತ್ತೀರಿ. ಆತನಿಂದ ಅತ್ಯುತ್ತಮವಾದುದನ್ನು ನಿರೀಕ್ಷಿಸುತ್ತೀರಿ. ಪರಮಾತ್ಮನಿಂದ ಲಭಿಸಿದ ಸರ್ವಸಿದ್ಧಿಗಳಿಗೂ ಕೊನೆಯುಂಟು. ಆದರೆ ಅವನ ಪ್ರೇಮ ನಿರಂತರವಾದದ್ದು. ಕಾಲಜ್ಞಾನ, ತಿಳಿಯದ ಭಾಷೆಗಳಲ್ಲಿ ಮಾತನಾಡುವ ಕಲೆ ಇತ್ಯಾದಿ ಸಿದ್ಧಿಗಳು ಕೊನೆಗೊಳ್ಳುವುವು. ಸಿದ್ಧಿಗಳ ಸಹಾಯವಿದ್ದರೂ ನಮ್ಮ ಅಜ್ಞಾನ ಅಪಾರ. ಕೇವಲ ಸಿದ್ಧಿಗಳ ಆಧಾರದ ಮೇಲೆ ಮಾಡಿದ ಬೋಧನೆಗಳು ಸಹ ಅಪೂರ್ಣ. ಆದರೆ ಪರಮಾತ್ಮನ ಕೃಪೆಯಿಂದ ಪರಿಪೂರ್ಣತೆಯನ್ನು ಪಡೆದಮೇಲೆ ಸಿದ್ಧಿಗಳ ಆವಶ್ಯಕತೆ ಇರದು. ಅವು ತಾವಾಗಿಯೇ ಕೊನೆಗೊಳ್ಳುತ್ತವೆ. ಇದು ಹೇಗೆಂದರೆ ನಾನು ಮಗುವಾಗಿದ್ದಾಗ ಮಗುವಿನಂತೆ ಭಾವಿಸುತ್ತಿದ್ದೆ; ವಿಚಾರ ಮಾಡುತ್ತಿದ್ದೆ ಮತ್ತು ನಡೆದುಕೊಳ್ಳುತ್ತಿದ್ದೆ. ಆದರೆ ಈಗ ನಾನೊಬ್ಬ ಮನುಷ್ಯನಾಗಿ ಬೆಳೆದಿದ್ದೇನೆ. ಚಿಕ್ಕಂದಿನ ಅಜ್ಞಾನಗಳನ್ನೆಲ್ಲ ದೂರ ಮಾಡಿದ್ದೇನೆ. ಹಾಗೆಯೇ ನಮ್ಮ ಸದ್ಯದ ಪರಿಸ್ಥಿತಿಯಲ್ಲಿ ಪರಮಾತ್ಮನನ್ನು ಸ್ವಲ್ಪಮಾತ್ರ ಅರ್ಥಮಾಡಿಕೊಳ್ಳಬಲ್ಲೆವು; ಬಹುಶಃ ಹೊಗೆ ಹಿಡಿದ ಕನ್ನಡಿಯ ಪ್ರತಿಫಲನದಂತೆ. ಆದರೆ ಮುಂದೊಂದು ದಿನ ಆತನನ್ನು ಮುಖತಃ ಸ್ಪಷ್ಟವಾಗಿ ಪರಿಪೂರ್ಣವಾಗಿ ನೋಡಬಲ್ಲೆವು. ಸದ್ಯದ ಪರಿಸ್ಥಿತಿಯಲ್ಲಿ ನನಗಂತೂ ಪರಮಾತ್ಮನ ದರ್ಶನ ಮಂಜಿನಂತೆ ಅಸ್ಪಷ್ಟ. ಆದರೆ ಪರಮಾತ್ಮ ನನ್ನ ಹೃದಯವನ್ನು ಈಗ ಎಷ್ಟು ಸ್ಪಷ್ಟವಾಗಿ ನೋಡುತ್ತಿದ್ದಾನೋ ಅಷ್ಟೇ ಸ್ಪಷ್ಟವಾಗಿ ನಾನು ಆತನನ್ನು ನೋಡುವೆನೆಂಬ ಭರವಸೆ ನನಗಿದೆ.

"ಈಗ ಮೂರು ಉಳಿದಿವೆ: ಶ್ರದ್ಧೆ, ವಿಶ್ವಾಸ ಮತ್ತು ಪ್ರೇಮ. ಈ ಮೂರರಲ್ಲಿ ಪ್ರೇಮ ಅಥವಾ ಪ್ರೀತಿ ಅತೀ ಮಹತ್ವದ್ದೆಂದು ತಿಳಿದಿದ್ದೇನೆ. ಆದ್ದರಿಂದ ಪ್ರೀತಿಯನ್ನು ಅನುಸರಿಸಿ, ಆಧ್ಯಾತ್ಮಿಕ ಸಂಪತ್ತನ್ನು ಬಯಸಿ."